# ಕುವೆಂಪು ವಿಶ್ವವಿದ್ಯಾಲಯ

ಜ್ಞಾನಸಹ್ಯಾದ್ರಿ, ಶಂಕರಘಟ್ಟ–577451, ಶಿವಮೊಗ್ಗ ಜಿಲ್ಲೆ.
ಪರೀಕ್ಷಾಂಗ ವಿಭಾಗ

ದಿನಾಂಕ:10–08–2022ರಂದು ಕುಲಸಚಿವರು(ಮೌಲ್ಯಮಾಪನ)ರವರ ಕೊಠಡಿಯಲ್ಲಿ ನೂತನ ಶಿಕ್ಷಣ ನೀತಿ NEP ಯಡಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಒದಗಿಸಬೇಕಾದ 20 (ಇಪ್ಪತ್ತು) ಪುಟಗಳ ಸೈದ್ಧಾಂತಿಕ ಉತ್ತರಪತ್ರಿಕೆಗಳಿಗೆ ದರ ನಿಗದಿ ಮಾಡುವ ಸಂಬಂಧದ ಸಭೆಯ ನಡಾವಳಿಗಳು.

ಹಾಜರಿದ್ದ ಮಾನ್ಯರು:

1. ಕುಲಸಚಿವರು(ಪರೀಕ್ಷಾಂಗ),
2. ಹಣಕಾಸು ಅಧಿಕಾರಿಗಳು,
3. ನಿರ್ದೇಶಕರು, ದೂರಶಿಕ್ಷಣ ನಿರ್ದೇಶನಾಲಯ, (ಪ್ರಭಾರ)
4. ನೋಡಲ್ ಅಧಿಕಾರಿಗಳು, ನೂತನ ಶಿಕ್ಷಣ ನೀತಿ, ಕುವೆಂಪು ವಿಶ್ವವಿದ್ಯಾಲಯ
5. ನೋಡಲ್ ಅಧಿಕಾರಿಗಳು, ಇ–ಪ್ರೊಕ್ಯೂರ್‌ಮೆಂಟ್, ಕುವೆಂಪು ವಿಶ್ವವಿದ್ಯಾಲಯ
6. ಉಪಕುಲಸಚಿವರು(ಪರೀಕ್ಷಾಂಗ)

**ಗೈರು ಹಾಜರಿ:**

1. ಶ್ರೀಮತಿ ಕಿರಣ್ ದೇಸಾಯಿ, ಸಿಂಡಿಕೇಟ್ ಸದಸ್ಯರು,

ವಿಶ್ವವಿದ್ಯಾಲಯವು ಪರೀಕ್ಷಾ ವಿಭಾಗಕ್ಕೆ ಅವಶ್ಯಕವಾಗಿ ಬೇಕಾದ NEP (32 ಪುಟಗಳು) / Non NEP (40 ಪುಟಗಳು) ಹಾಗೂ 12 ಪುಟಗಳ IA/Practical ಉತ್ತರಪತ್ರಿಕೆಗಳನ್ನು ಮುದ್ರಿಸಿಕೊಳ್ಳುವ ಕುರಿತಂತೆ KTPP ಕಾಯ್ದೆ ಪ್ರಕಾರ ಆಹ್ವಾನಿಸಲಾದ ಟೆಂಡರ್‌ನಲ್ಲಿ, ಮಾನ್ಯ ಕುಲಪತಿಯವರ ಅನುಮೋದನೆಯೊಂದಿಗೆ ಅಧಿಕೃತ ಜ್ಞಾಪನ ಸಂಖ್ಯೆ:KU/EB/SP-1/2278/2022-23/ Date:04-07-2022 ರನುಸಾರ ರಚಿಸಲಾಗಿದ್ದ ಟೆಂಡರ್ ಪರಿಶೀಲನಾ ಸಮಿತಿಯ ಕೂಲಂಕುಷವಾದ ಪರಿಶೀಲನೆಯ ನಂತರ ಅರ್ಹಗೊಂಡ M/s Hitech Print Systems Limited, Bangalore. ಇವರೊಂದಿಗೆ ದಿನಾಂಕ:22–07–2022ರಂದು ದರ ಒಪ್ಪಂದದ ಕರಾರು ಮಾಡಿಕೊಂಡು ಅವಶ್ಯವಿರುವ ಉತ್ತರಪತ್ರಿಕೆಗಳ ಮುದ್ರಣಕ್ಕೆ ಸಂಬಂಧಿಸಿದಂತೆ ಸರಬರಾಜು ಪತ್ರ ನೀಡಲಾಗಿರುತ್ತದೆ.

ವಿಶ್ವವಿದ್ಯಾಲಯದ ನೂತನ ಶಿಕ್ಷಣ ನೀತಿಗೆ ಸಂಬಂಧಿಸಿದಂತೆ ನೋಡಲ್ ಅಧಿಕಾರಿಯವರು ಇತ್ತೀಚಿಗೆ ಕುಲಸಚಿವರು(ಪರೀಕ್ಷಾಂಗ)ರವರನ್ನು ಬೇಟಿ ಮಾಡಿ NEP ಮಾರ್ಗಸೂಚಿಯನುಸಾರ NEP ಯಡಿ ಪ್ರವೇಶಪಡೆದಿರುವ ವಿದ್ಯಾರ್ಥಿಗಳಿಗೆ 25 ಅಂಕಗಳ ಪರೀಕ್ಷೆ ಬರೆಯಲು ಒಟ್ಟು 20 (ಉತ್ತರ ಬರೆಯಲು 16 ಪುಟಗಳು + 04 ಹೊರ ಪುಟಗಳು) ಸೈದ್ಧಾಂತಿಕ ಉತ್ತರಪತ್ರಿಕೆಗಳನ್ನು ಪ್ರತ್ಯೇಕವಾಗಿ ಒದಗಿಸಬೇಕೆಂದು ಸದರಿ ಉತ್ತರಪತ್ರಿಕೆಗಳನ್ನು ಮುದ್ರಿಸಿಕೊಳ್ಳುವಂತೆ ಕೋರಿರುತ್ತಾರೆ.

ಈ ಹಂತದಲ್ಲಿ ಟೆಂಡರ್ ಕರೆಯುವ ಅಥವಾ ಪ್ರಸ್ತುತ ದರ ಒಪ್ಪಂದದ ಕರಾರು ಮಾಡಿಕೊಂಡಿರುವ ಮುದ್ರಣ ಸಂಸ್ಥೆಯವರಿಂದ, ಸದರಿ ಉತ್ತರಪತ್ರಿಕೆಗಳಿಗೆ ದರ ನಿಗದಿ ಮಾಡಿ ಮುದ್ರಿಸಿಕೊಳ್ಳಬೇಕೆ ಎಂಬುದರ ಕುರಿತಂತೆ ಸುಧೀರ್ಘ ಚರ್ಚೆ ನಡೆಸಿ, ಉತ್ತರಪತ್ರಿಕೆಗಳ ಮುದ್ರಣ ವೆಚ್ಚವು ಅಧಿಕವಾಗಲಿರುವುದರಿಂದ ಟೆಂಡರ್ ಕರೆಯದೆ ಉತ್ತರಪತ್ರಿಕೆಗಳನ್ನು ಮುದ್ರಿಸಿಕೊಂಡಾಗ ಮುಂದೆ ಲೆಕ್ಕ ಪರಿಶೋದನೆಯಲ್ಲಿ ಆಕ್ಷೇಪಣೆ ಆಗುವ ಸಾಧ್ಯತೆ ಇರುವುದರಿಂದ ಹಾಗೂ ಪರೀಕ್ಷೆಗಳು ಸಮೀಪವಾಗಿರುವುದರಿಂದ ಮಾನ್ಯ ಕುಲಪತಿಯವರಿಂದ ಅನುಮೋದನೆ ಪಡೆದು ಹೊಸದಾಗಿ ಅಲ್ಪಾವಧಿ ಟೆಂಡರ್ ಕರೆದು ಎನ್.ಇ.ಪಿ. ವಿದ್ಯಾರ್ಥಿಗಳಿಗೆ ಅವಶ್ಯಕವಾಗಿ ಪರೀಕ್ಷೆ ಬರೆಯಲು ಬೇಕಾಗಿರುವ 20 (ಇಪ್ಪತ್ತು) ಪುಟಗಳ ಸೈದ್ಧಾಂತಿಕ ಉತ್ತರಪತ್ರಿಕೆಗಳನ್ನು ಮುದ್ರಿಸಿಕೊಳ್ಳುವುದು ಸೂಕ್ತವೆಂದು ಸಭೆಯಲ್ಲಿ ಸರ್ವಾನುಮತವಾಗಿ ನಿರ್ಣಯ ಕೈಗೊಳ್ಳಲಾಯಿತು.

ಅಂತಿಮವಾಗಿ ಉಪಕುಲಸಚಿವರು ಸಭೆಯ ಯಶಸ್ಸಿಗೆ ಸಹಕರಿಸಿದ ಅಧ್ಯಕ್ಷರು ಮತ್ತು ಎಲ್ಲಾ ಸದಸ್ಯರುಗಳಿಗೆ ವಂದನೆಗಳನ್ನು ತಿಳಿಸಿದರು.

1. ಕುಲಸಚಿವರು(ಪರೀಕ್ಷಾಂಗ), -
2. ಹಣಕಾಸು ಅಧಿಕಾರಿಗಳು, -
3. ನಿರ್ದೇಶಕರು, ದೂರಶಿಕ್ಷಣ ನಿರ್ದೇಶನಾಲಯ, (ಪ್ರಭಾರ) -
4. ನೋಡಲ್ ಅಧಿಕಾರಿಗಳು, ನೂತನ ಶಿಕ್ಷಣ ನೀತಿ, ಕುವೆಂಪು ವಿಶ್ವವಿದ್ಯಾಲಯ -
5. ನೋಡಲ್ ಅಧಿಕಾರಿಗಳು, ಇ-ಪ್ರೊಕ್ಯೂರ್‌ಮೆಂಟ್, ಕುವೆಂಪು ವಿಶ್ವವಿದ್ಯಾಲಯ -
6. ಉಪಕುಲಸಚಿವರು(ಪರೀಕ್ಷಾಂಗ) -